ವಿಭಜಿಸುವುದು ಹೇಗೆ? ಅದು ಸಂಭವನೀಯ ವರ್ಗೀಕರಣದ ಮೂಲಕ ಸಾಧ್ಯ ಅನ್ನುತ್ತದೆ ಶಾಸ್ತ್ರ. ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಸಕಲ ಜೀವರಾಶಿಗಳನ್ನು ಪ್ರಪ್ರಥಮವಾಗಿ ವರ್ಗೀಕರಿಸುವಾಗ ಅರಿಸ್ಟಾಟಲ್ ಕೂಡಾ ನೆಚ್ಚಿಕೊಂಡಿದ್ದು ಈ ನಿಯಮವನ್ನೇ. ಇಲ್ಲದಿದ್ದರೆ ಎಣಿಕೆಗೂ ಸಿಗದ ಅನನ್ಯ ಜೀವಪ್ರಭೇದಗಳನ್ನು (ಇದು ನಡೆಯುವ, ಇದು ಹಾರುವ, ಇದು ಮೊಟ್ಟೆಯಿಡುವ, ಇದು ಮರಿಹಾಕುವ... ಹೀಗೇ ವಿವಿಧ ಪಂಗಡಗಳಲ್ಲಿ) ವಿಂಗಡಿಸುವುದು ಸಂಭವವಿತ್ತೇ?

ಇವೆಲ್ಲಾ ಉದಾಹರಣೆಗಳು ಯಾಕೆ? ಹವಾಮಾನ ಮುನ್ಸೂಚನೆ, ಪ್ರಕೃತಿ ವಿಕೋಪದ ಎಚ್ಚರಿಕೆ, ಚುನಾವಣಾ ಸಮೀಕ್ಷೆ ಇವೆಲ್ಲವುಗಳ ಹಿಂದಿರುವುದೂ ಇದೇ ಎಣಿಕೆಯಲ್ಲವೇ? ಜೀವವಿಮೆಯ ವ್ಯಾಪಾರ ನಿಂತಿರುವುದೇ ಈ ಲೆಕ್ಕಾಚಾರದ ತಳಹದಿಯ ಮೇಲೆ. ನಿಲ್ದಾಣದಲ್ಲಿ ಕಾಯುತ್ತ ನಿಂತಿರುವಾಗ ಸಿಟಿ ಬಸ್ಸು ಅರ್ಧ ಗಂಟೆಯಾದರೂ ಬಾರದೇ ಒಮ್ಮೆಲೇ ಒಂದರ ಹಿಂದೆ ಇನ್ನೊಂದು ಬರುವುದು; ರೈಲಿಗಿಂತ ಬಸ್ ಪ್ರಯಾಣದಲ್ಲಿ ಅವಘಡಗಳು ಹೆಚ್ಚು, ಇವೆರಡಕ್ಕಿಂತ ವಿಮಾನ ಅಪಘಾತದ ಸಾಧ್ಯತೆ ಕಡಿಮೆ, ಆದರೆ ವಿಮಾನ ದುರಂತದಲ್ಲಿ ಬದುಕುಳಿಯುವ ಸಾಧ್ಯತೆ ಉಳಿದೆರಡಕ್ಕಿಂತ ಕಡಿಮೆ... ಹೀಗೆ ನಿತ್ಯ ಜೀವನದ ಪ್ರತಿ ಘಟ್ಟದಲ್ಲೂ ಸಂಭವನೀಯತೆಯ ಪ್ರಮೇಯ ಹಾಸುಹೊಕ್ಕಾಗಿದೆ. ಹಾಗಾದರೆ, ಸಾಹಿತ್ಯಕ್ಕೂ ಈ ಪ್ರೊಬಾಬಿಲಿಟಿ ಸಿದ್ಧಾಂತ ಅನ್ವಯವಾಗಬಲ್ಲುದೇ? ಸಾಹಿತ್ಯದ ಕೃತಿಯೊಂದು ಶ್ರೇಷ್ಠ ಅಥವಾ ಜನಪ್ರಿಯ ಅನ್ನುವುದನ್ನು ನಿರ್ಧರಿಸುವುದು ಅದರ ಸಂಭವನೀಯತೆಯ ಸಂಕೀರ್ಣತೆಯೇ?

ಶ್ರೇಷ್ಠ ಲೇಖಕನೊಬ್ಬ ಸಂಭವನೀಯತೆಯ ಅತ್ಯುತ್ತಮ ಎಲಿಮೆಂಟುಗಳನ್ನೆಲ್ಲ ತನ್ನ ಕೃತಿಯಲ್ಲಿ ಬಳಸಿಕೊಳ್ಳುತ್ತಲೇ, ಆ ಸಂಭವನೀಯತೆಯ ಗಡಿಯನ್ನೂ ಮುರಿಯಲು ಏಕಕಾಲಕ್ಕೆ ಪ್ರಯತ್ನಿಸುತ್ತಿರುತ್ತಾನೆ. ಅದು ಭಾಷೆಯಾಗಲೀ, ತಂತ್ರ, ವಸ್ತು, ರೂಪಕ – ಹೀಗೇ ಯಾವುದೇ ಆದರೂ ಸಂಭಾವ್ಯದ ಮೇರೆ ಮೀರಿದಾಗಲೇ 'ಹೊಸತು' ಸೃಷ್ಟಿಯಾಗುತ್ತದೆ. ಗಣಿತದ ಸಂಭವನೀಯತೆಗೂ ಸಾಹಿತ್ಯಕ್ಕೂ ಇರುವ ವ್ಯತ್ಯಾಸವೇ ಅದು. ಗಣಿತ ವಿಜ್ಞಾನದ ಪ್ರಕಾರ ನಕ್ಷತ್ರವೊಂದು ಇಷ್ಟು ಜ್ಯೋತಿರ್ವರ್ಷ ದೂರದಲ್ಲಿದೆ ಎಂಬುದಾದರೆ, ಸಾಹಿತಿಗೆ ಅದು ಹಿಮಪರ್ವತದಲ್ಲಿ ಧ್ಯಾನಸ್ಥನಾಗಿ ಕುಳಿತ ಸನ್ಯಾಸಿಯೋರ್ವ ಕ್ಷಣಾರ್ಧದಲ್ಲಿ ಕ್ರಮಿಸಬಹುದಾದ ದೂರವಾಗಬಹುದು. ಈ ಭೂಮಿಯ ಮೇಲಿನ ಯಾವುದೇ ಸಂಭಾವ್ಯ ನಿಯಮಗಳನ್ನೂ ಕವಿ ತನ್ನರಿವಿನಡಿಯಲ್ಲಿ ಮುರಿಯಬಲ್ಲ. ಸಿದ್ಧ ವ್ಯಾಕರಣವನ್ನು ತಿರುಚುವುದು, ಹೊಸ ಪದಗಳನ್ನು ಹುಟ್ಟು ಹಾಕುವುದು ಕವಿಗೆ ಮಾತ್ರ ಸಾಧ್ಯ. ಶೇಕ್ಸ್‌ಪಿಯರನ ಅದೆಷ್ಟೋ ಶಬ್ದಗಳಿಗೆ ನಿಘಂಟುವಿನಲ್ಲಿ ಅರ್ಥವೇ ಇಲ್ಲವಲ್ಲ!

ಮುಂದಿನ ಪ್ರಶ್ನೆಯೇನೆಂದರೆ–ಈ ಸಂಭವನೀಯತೆಯ ನಿಯತಾಂಕವನ್ನು ಕಂಪ್ಯೂಟರುಗಳ ಮೂಲಕ ಇಂದು ಯಥೇಚ್ಛವಾಗಿ ಬಳಸಿಕೊಳ್ಳಲಾಗುತ್ತಿದೆಯಷ್ಟೇ? ಅನಾಲಿಟಿಕ್ಸ್, ದತ್ತಾಂಶ ಸಂಗ್ರಹ, ಸೇಲ್ಸ್ ಫೋರ್‌ಕಾಸ್ಟ್... ಹೀಗೆ. ಇದಕ್ಕೆ ಸಾಹಿತ್ಯವೂ ಹೊರತಾಗಿಲ್ಲ. ಸಾಹಿತ್ಯದ ಸಂಭಾವ್ಯತೆಗಳನ್ನೆಲ್ಲ ಕ್ರೋಡೀಕರಿಸಿಕೊಂಡು ಕೃತಕ ಬುದ್ಧಿಮತ್ತೆಯ ಯಂತ್ರಗಳು ಕಥೆ–ಕವನಗಳನ್ನು ರಚಿಸುವುದೂ ಹಳೆಯ ವಿದ್ಯಮಾನ. ಆದರೆ, ಅವು ಮನುಷ್ಯನಿಗೆ ಸಮಾನವಾಗಿ ಸಾಹಿತ್ಯಿಕ ಕೃತಿಗಳನ್ನು ರಚಿಸಬಲ್ಲವೇ? ಉತ್ತರ ಕಂಡುಕೊಳ್ಳುವ ಮುನ್ನ ಎರಡು ನಿದರ್ಶನಗಳನ್ನು ವಿಶ್ಲೇಷಿಸೋಣ.



ಕಲೆ: ಡಾ. ಸಿ. ರವೀಂದ್ರನಾಥ್